WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

**ಮಾಸಪತ್ರಿಕೆ – 15 ಜುಲೈ 2008**

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-8 ಸಂಚಿಕೆ-7 ಪುಟಗಳು-6 Registered Under No.KA/SK/UDP/1260/2006-2008 Dated from 01-01-2006 to 31-12-2008.

## ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವಾರ್ಷಿಕ ಮಹಾಸಭೆ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ) ಉಡುಪಿ ಇದರ 2007-2008ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.29-06-2008ರ ರವಿವಾರ ಬೆಳಿಗ್ಗೆ 10-30ಕ್ಕೆ ಶ್ರೀ ವೈ. ಮೋಹನ ರಾಯರ ಪ್ರಾರ್ಥನೆ ಯೊಂದಿಗೆ ಆರಂಭಗೊಂಡಿತು. ಸದಾನಂದ ರಾವ್ ಎಂ. ಚಿಟ್ಪಾಡಿ ಇವರ ಧರ್ಮಪತ್ನಿ ಶ್ರೀಮತಿ ಶಾರದಮ್ಮರವರು ಇತ್ತೀಚೆಗೆ ಸ್ವರ್ಗಸ್ಥರಾಗಿದ್ದು, ಅವರು ನಮ್ಮ ಸಂಘದ ಸಕ್ರಿಯ ಸದಸ್ಯರಾಗಿದ್ದು ಅವರ ನಿಸ್ವಾರ್ಥ ಕೊಡುಗೆಯನ್ನು ಸ್ಮರಿಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಭಾಧ್ಯಕ್ಷತೆ ಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾಗಿರುವ ಶ್ರೀ ಸಿ. ಎಸ್. ರಾಯರು ಪ್ರಾಸ್ತಾವಿಕ ನುಡಿ ಯೊಂದಿಗೆ ಎಲ್ಲರನ್ನೂ ಸ್ವಾಗತಿಸಿದರು. ಅನಂತರ ಕಾರ್ಯದರ್ಶಿಗಳಾದ ಶ್ರೀ ವೈ. ಭುವನೇಂದ್ರ ರಾಯರು 2006-2007ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯನ್ನು ಸಭೆಯ ಮುಂದೆ ಓದಿದರು. ಅದು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ನಂತರ ಕಾರ್ಯದರ್ಶಿಗಳು 2007-2008ನೇ ಸಾಲಿನ ಸಂಘದ ವಿವಿಧ ಚಟುವಟಿಕೆಗಳ ವಿವರಗಳ ವರದಿಯನ್ನು ವಾಚಿಸಿದರು. ಕೆಲವೊಂದು ಸಣ್ಣಪುಟ್ಟ ತಿದ್ದು ಪಡಿಗಳೊಂದಿಗೆ ಅದು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. 2007-08ನೇ ಸಾಲಿನ ಆಯವ್ಯಯ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆಗಳ ಪರಿಶೋಧಿತ ವರದಿಯನ್ನು ಕೋಶಾಧಿಕಾರಿ ಗಳಾದ ಶ್ರೀ ಎಮ್. ಸದಾನಂದರಾಯರು ಮಂಡಿಸಿದರು. ಸುದೀರ್ಘ ಚರ್ಚೆಯ ನಂತರ ಆರ್ಥಿಕ ವರದಿಯು ಅಂಗೀಕರಿಸಲ್ಪಟ್ಟಿತು. 2008-09ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಯನ್ನು ಮಂಡಿಸಲಾಗಿ ಅದು ಕೂಡಾ ಅಂಗೀಕರಿಸಲ್ಪಟ್ಟಿತು. 2008-09ನೇ ಸಾಲಿಗೆ ಲೆಕ್ಕ ಪರಿಶೋಧಕರಾಗಿ ಹೆಬ್ಬಾರ್ ಎಸೋಸಿಯೇಟ್ಸ್‌ನ ಶ್ರೀ ಗಣೇಶ್ ಹೆಬ್ಬಾರ್ ರವರನ್ನು ಮುಂದುವರಿಸಲು ಅನುಮತಿ ಸಲಾಯಿತು. ಲಿಖಿತ ರೂಪದಲ್ಲಿ ಬಂದಿರುವ ಇಪ್ಪತ್ತಕ್ಕೂ ಅಧಿಕ ಪ್ರಶ್ನೆಗಳಿಗೆ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ಉತ್ತರಿಸಿದರು. ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ಹಲವಾರು ವಿಚಾರಗಳು ಚರ್ಚಿಸಲ್ಪಟ್ಟವು. ಸಭಾಕಾರ್ಯಕ್ರಮದ ಅಂತ್ಯಕ್ಕೆ ಕಾರ್ಯದರ್ಶಿ ಗಳು ಧನ್ಯವಾದ ಸಮರ್ಪಿಸಿದರು. ವೇದಿಕೆಯಲ್ಲಿ ಉಪಾಧ್ಯಕ್ಷರುಗಳು, ಜೊತೆ ಕಾರ್ಯದರ್ಶಿಗಳು ಮತ್ತು ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದು ಪ್ರಶ್ನೋತ್ತರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ**
**ಮಹಿಳಾ ವೇದಿಕೆ – ಪ್ರಕಟಣೆ**

### ವರಮಹಾಲಕ್ಷ್ಮೀ ವ್ರತ

**ಉಡುಪಿ ಶ್ರೀ ಶಾರದಾ ದೇವಸ್ಥಾನ ದಲ್ಲಿ ಸಾಮೂಹಿಕ ವರಮಹಾಲಕ್ಷ್ಮೀ ವ್ರತ ಪೂಜೆಯು ತಾ.15-8-2008 ರಂದು ಶುಕ್ರವಾರ ಸಾಯಂಕಾಲ 4-00ಗಂಟೆಗೆ ನೆರವೇರಲಿದೆ. ಭಾಗವಹಿಸುವ ಭಕ್ತ ಬಾಂಧವರು ಫಲಪುಷ್ಪ, ತುಳಸಿ, ವೀಳ್ಯ, ಕುಂಕುಮ, ಅರಸಿನ, ಸಣ್ಣ ಕಾಲುದೀಪ ಮೊದಲಾದ ಸಾಮಾಗ್ರಿಗಳೊಂದಿಗೆ (ಸಾಧ್ಯವಿದ್ದವರು ಮಧ್ಯಾಹ್ನ ಉಪವಾಸ ವಿದ್ದು) ಸಮಯಕ್ಕೆ ಸರಿಯಾಗಿ ಶ್ರೀ ಶಾರದಾ ಮಂಟಪಕ್ಕೆ ಆಗಮಿಸಿ ಸಹಕರಿಸಬೇಕೆಂದೂ, ಹಾಗೆಯೇ ಅಂದು ಸಂಜೆ ಶ್ರೀ ದೇವಸ್ಥಾನದಲ್ಲಿ ನಡೆಯುವ ಸಾಮೂಹಿಕ ಹೂವಿನ ಪೂಜಾ ಕಾರ್ಯಕ್ರಮದಲ್ಲಿಯೂ ಪಾಲ್ಗೊಳ್ಳಬೇಕೆಂದೂ ಸಂಘದ ಮಹಿಳಾ ವೇದಿಕೆಯ ಅಧ್ಯಕ್ಷರು ಮತ್ತು ಸಂಚಾಲಕರು ವಿನಂತಿಸಿದ್ದಾರೆ.**

**ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ**
**ಸೌರ ಋಗುಪಾಕರ್ಮವು**
**ತಾ.12-09-2008ರಂದು ಶುಕ್ರವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.**
***ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.***
**- ಕಾರ್ಯದರ್ಶಿ**

## ಎನ್.ಡಿ. ಜಗನ್ನಾಥ ರಾವ್-ಉಷಾ ಜೆ. ರಾವ್ ದಂಪತಿಗಳು ದೈವಾಧೀನ





ನಂದಳಿಕೆ ಮನೆತನದಿಂದ ಬಂದ ಮೂವರು ಉನ್ನತ ಅಧಿಕಾರಿಗಳಲ್ಲಿ (ಐಸಿಎಸ್, ಐಎಎಸ್) ಒಬ್ಬರಾದ ನಂದಳಿಕೆ ಎನ್.ಡಿ.ಜೆ.ರಾವ್ ಅಭಿದಾನದಿಂದ ಸ್ಥಾನಿಕ ಸಮಾಜದಲ್ಲಿ ಹೆಸರಾಗಿದ್ದ ನಂದಳಿಕೆ ದೇವರಾವ್ ಜಗನ್ನಾಥರಾವ್‌ರವರು (80 ವರ್ಷ) ತಮ್ಮ ಸಾರ್ಥಕ ಜೀವನದಿಂದ ಮುಕ್ತರಾಗಿ ತಾ.14-6-2008ರಂದು ಅನಂತಾತ್ಮದಲ್ಲಿ ಐಕ್ಯರಾದರು.

ಗಣಿತದಲ್ಲಿ ಸ್ನಾತಕೋತ್ತರ (ಎಂ.ಎ.) ಪದವಿ ಪಡೆದ ಎನ್.ಡಿ.ಜೆ.ಯವರು 1941ರಲ್ಲಿ 2ನೇ ಮಹಾಯುದದ ಸಮಯದಲ್ಲಿ ಭಾರತೀಯ ಸೈನಿಕ ಸೇವೆಗೆ ಸೇರಿದರು. 1946ರಲ್ಲಿ ಐಸಿಎಸ್ ಪರೀಕ್ಷೆಯಲ್ಲಿ ಆಯ್ಕೆಯಾದರು. ಸ್ವಾತಂತ್ರ್ಯಪೂರ್ವ ಹಾಗೂ ಅನಂತರ ಅನೇಕ ಉನ್ನತ ಸರಕಾರಿ ಹುದ್ದೆಗಳನ್ನು ನಿರ್ವಹಿಸಿದ್ದ ಮೃತರು ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿ ಎಂದು ಗುರುತಿಸಲ್ಪಟ್ಟಿದ್ದರು.

ನಿವೃತ್ತಿಯ ಅನಂತರ ಊಟಿಯ ಹಿಂದೂಸ್ಥಾನ ಫಿಲಂಸ್ ಸಂಸ್ಥೆಯ ಆಡಳಿತಾಧಿಕಾರಿಯಾಗಿ, ಮದ್ರಾಸ್ ರಾಜ್ಯದ ರಾಜ್ಯಪಾಲರ ಮುಖ್ಯ ಸಲಹಾಧಿಕಾರಿಯಾಗಿ, ಬಿಹಾರ್‌ನ ವಿದ್ಯುತ್ ಮಂಡಳಿಯ ಅಧ್ಯಕ್ಷರಾಗಿ, ಬಿಹಾರ ರಾಜ್ಯ ಸರಕಾರದ ಮುಖ್ಯಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ ಹಿರಿಮೆ ಎನ್.ಡಿ.ಜೆ.ಯವರಿಗೆ ಸಲ್ಲುತ್ತದೆ.

ಸರ್ದಾರ್ ಪಟೇಲ್, ಡಾ। ಕೆ.ಸಿನ್ಹಾ, ಜಿ.ವಿ.ಪಂಥ್, ಕಾಮರಾಜ್ ನಾಡರ್ ಮೊದಲಾದ ಘನವೆತ್ತ ವ್ಯಕ್ತಿಗಳ ಒಡನಾಟದಲ್ಲಿದ್ದರೆಂಬುದೂ ಉಲ್ಲೇಖನೀಯ. ಸ್ಥಾನಿಕ ಸಮಾಜದ ಅನೇಕ ಸಂಘ-ಸಂಸ್ಥೆಗಳಿಗೆ ಕೊಡುಗೈದಾನಿಯಾಗಿ ಸಹಕರಿಸಿದ ದಿವಂಗತರು ಉಡುಪಿಯ ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿ ಪ್ರೋತ್ಸಾಹಿಸಿದ್ದರು. ಇವರ ಮೇರು ವ್ಯಕ್ತಿತ್ವದ ಬಗ್ಗೆ ಶ್ರೀಶಾರದಾ ಪತ್ರಿಕೆಯಲ್ಲಿ ಈ ಹಿಂದೆ ಸಂಪೂರ್ಣ ಲೇಖನ ಪ್ರಕಟವಾಗಿತ್ತು.

**ಡಾ। ಉಷಾ ಜೆ. ರಾವ್**

ಪತಿಯ ಮರಣದ ಕೇವಲ 3 ದಿನಗಳ ನಂತರ ಅಂದರೆ 17-6-2007ರಂದು ಶ್ರೀಮತಿ ಉಷಾ ಜೆ.ರಾವ್‌ರವರು ನಿಧನರಾದರು. ಆಯುರ್ವೇದ ವೈದ್ಯಭೂಷಣ ಎಮ್.ವಿ.ಶಾಸ್ತ್ರಿಯವರ ಪುತ್ರಿಯಾದ ಇವರು ಪಾಟ್ನಾ ವಿ.ವಿ.ಯಿಂದ ಸಮಾಜ ಶಾಸ್ತ್ರದಲ್ಲಿ ಎಂ.ಎ. ಪದವಿ ಹಾಗೂ ಸ್ವರ್ಣ ಪದಕಗಳನ್ನು ಗಳಿಸಿದ ಕೀರ್ತಿವಂತರು. ಬೇರೆ ಬೇರೆ ವಿಶ್ವವಿದ್ಯಾನಿಲಯ ಗಳಲ್ಲಿ ಉಪನ್ಯಾಸಕಿಯಾಗಿ, ಬೆಂಗಳೂರಿನ ಸಾಮಾಜಿಕ, ಆರ್ಥಿಕ ಬದಲಾವಣೆಯ ಭಾರತೀಯ ಸಂಸ್ಥೆಯಲ್ಲಿ ಪ್ರಾಧ್ಯಾಪಕಿಯಾಗಿಯೂ ಸೇವೆಯಲ್ಲಿದ್ದು ನಿವೃತ್ತರಾದವರು.

ಭಾರತೀಯ ನಾರಿಯರ ಅಂತರಾಳದ ಬಯಕೆಯಂತೆ ಸುಮಂಗಲಿ ಸಾವು ಎಂದೇ ಕರೆಯಬಹುದಾದ ಡಾ। ಉಷಾ ಜೆ. ರಾವ್ ಐಚ್ಛಿಕ ಮರಣವನ್ನು ಪಡೆದಿದ್ದಾರೆಂದೇ ಕರೆಯ ಬಹುದೇನೋ?

ಎನ್.ಡಿ.ಜೆ.ರಾವ್ ಹಾಗೂ ಡಾ। ಉಷಾ ಜೆ. ರಾವ್ ದಂಪತಿಗಳು ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ. ಇವರಿಬ್ಬರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಶ್ರೀಶಾರದಾ ಬಳಗವು ಪ್ರಾರ್ಥಿಸುತ್ತದೆ.

## ಅಸ್ತಂಗತರಾದ ಲೇಖಕಿ - ಶಾರದಾ ಆರ್. ರಾವ್ ಧರ್ಮಸ್ಥಳ



ಸ್ಥಾನಿಕ ಸಮಾಜದ ಖ್ಯಾತ ಲೇಖಕಿ ಧರ್ಮಸ್ಥಳದ ಶ್ರೀಮತಿ ಶಾರದಾ ಆರ್.ರಾವ್ (68 ವರ್ಷ)ರವರು ಸ್ವಗೃಹ 'ಸತ್ಯನಿಲಯ'ದಲ್ಲಿ ತಾ.1-7-2008ರಂದು ನಿಧನರಾದರು.

ಧರ್ಮಸ್ಥಳದ ಮಂಜುನಾಥೇಶ್ವರ ದೇವಾಲಯದ ನಿವೃತ್ತ ಉದ್ಯೋಗಿ ರಮೇಶ್ ರಾವ್‌ರವರ ಧರ್ಮಪತ್ನಿಯಾದ ಶ್ರೀಮತಿ ಶಾರದಾ ಆರ್.ರಾವ್ ಮಾತೃಶ್ರೀ ರತ್ನಮ್ಮ ಹೆಗ್ಗಡೆಯವರ ಆತ್ಮೀಯರಾಗಿದ್ದು ಮಹಿಳಾಪರ ಹೋರಾಟಗಾರ್ತಿ ಯಾಗಿದ್ದರು. ಕಾವ್ಯಗುಚ್ಛ, ಕಾವ್ಯ ಕರವೀರ, ಪ್ರತಿಫಲನ, ಸಪ್ತಸ್ವರ ಮೊದಲಾದ ಕವನ ಸಂಕಲನಗಳನ್ನು ಹೊರತಂದ ಇವರು 'ಪ್ರೀತಿದ ಬೆಲೆ', 'ಭೂತಮ್ಮನ ಬೂಟಾಟಿಗೆ', 'ಋಣ ಕಡ್ಪೆರಾವ' ಮೊದಲಾದ ನಾಟಕಗಳನ್ನೂ ಬರೆದಿರುತ್ತಾರೆ. ''ರತ್ನವರ್ಮ ಹೆಗ್ಗಡೆ ಪ್ರಶಸ್ತಿ'' ಪುರಸ್ಕೃತ ನಾಟಕ ರಚನಾಕಾರರಾದ ಶಾರದಾ ಆರ್.ರಾವ್, ಬೆಳ್ತಂಗಡಿ ತಾಲೂಕಿನ ಎಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲೂ ತಮ್ಮ ಸ್ವರಚಿತ ಕವನವಾಚನ ಮಾಡಿದ್ದರು. ಇತ್ತೀಚೆಗೆ ಬೆಳ್ತಂಗಡಿ ತಾಲೂಕು 8ನೇ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದು ಇವರಿಗೆ ಸಂದ ಗೌರವವಾಗಿದೆ. ಇವರ 'ಸಾಹಿತ್ಯ-ಭಾವ ಸಂಗಮ' ಹಾಗೂ 'ಬಾಲಕ ಮಣಿಕಂಠ' ಎಂಬ ಎರಡು ಧ್ವನಿ ಸುರುಳಿಗಳೂ ಪ್ರಕಟಗೊಂಡಿವೆ. 'ತುಳು ಸಾಹಿತ್ಯ ಅಕಾಡಮಿ ಪ್ರಶಸ್ತಿ', ಡಾ। ರಾಜ್‌ಕುಮಾರ್ ಅಭಿಮಾನಿಗಳ ಸಂಘದ 'ಕಲ್ಪನಾ ಪ್ರಶಸ್ತಿ' ಮೊದಲಾದ ಹಲವಾರು ಗೌರವಗಳು ಇವರಿಗೆ ಸಂದಿವೆ.

ಸಾಮಾಜಿಕ ಕಳಕಳಿ ಹೊಂದಿದ್ದ ಶ್ರೀಮತಿ ಶಾರದಾ ಆರ್.ರಾವ್ ಉನ್ನತ, ಉದಾತ್ತ ಮನೋಭಾವ ಹೊಂದಿದ್ದು ತಮ್ಮ ನೇತ್ರದಾನ ಮಾಡಬೇಕೆಂದು ಅನೇಕ ವರ್ಷಗಳ ಹಿಂದೆಯೇ ಬರೆದಿಟ್ಟಿದ್ದರೂ ಅವರ ಅಕಾಲಿಕ ಮರಣದ ಸಂದರ್ಭದಲ್ಲಿ ಮೃತರ ಸಂಬಂಧಿಕರು ಅದಕ್ಕಾಗಿ ಮಾಡಿದ ಪ್ರಯತ್ನಗಳೆಲ್ಲವೂ ತಾಂತ್ರಿಕ ಕಾರಣಗಳಿಂದ ಫಲಪ್ರದವಾಗಲಿಲ್ಲ.

ಶಾರದಾ ಆರ್.ರಾವ್‌ರವರು ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

ಶ್ರೀಶಾರದಾ ಪತ್ರಿಕೆಯಲ್ಲಿ ಇವರ ಅನೇಕ ಲೇಖನ-ಕವನಗಳು ಪ್ರಕಟಗೊಂಡಿದ್ದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಉಡುಪಿಯ ಶ್ರೀಶಾರದಾ ಬಳಗವು ಶ್ರೀಮತಿ ಶಾರದಾ ಆರ್.ರಾವ್ ರವರ ನಿಧನಕ್ಕೆ ಅಪಾರ ದುಖ ವ್ಯಕ್ತಪಡಿಸುತ್ತಾ ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ ಎಂದು ಪ್ರಾರ್ಥಿಸುತ್ತದೆ.